# ಮಾಂಸಾಹಾರ

ಕಾಡಿನಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತ ಜೀವನ ಸಾಗಿಸುತ್ತಿರುವ ಪ್ರಾಣಿಗಳ ಸಮತೋಲನವನ್ನು ಪ್ರಕೃತಿ ಬಹು ಎಚ್ಚರಿಕೆಯಿಂದ ಕಾಪಾಡಿಕೊಳ್ಳುತ್ತದೆ. ಸಸ್ಯಾಹಾರಿ ಪ್ರಾಣಿಗಳು ಮಾಂಸಾಹಾರಿ ಪ್ರಾಣಿಗಳಿಗಿಂತ ನೂರಾರು ಪಟ್ಟು ಅಧಿಕ ಸಂಖ್ಯೆಯಲ್ಲಿರುತ್ತವೆ. ಅವುಗಳಿಗೆ ಬೇಕಾದ ಆಹಾರ ಸಸ್ಯ ಸಂಪತ್ತು ನಿಸರ್ಗದಲ್ಲಿ ಹೇರಳವಾಗಿ ದೊರಕುತ್ತದೆ. ಇವುಗಳಿಗೆ ಹೋಲಿಸಿದಾಗ ಮಾಂಸಾಹಾರಿ ಪ್ರಾಣಿಗಳು ಸಂಖ್ಯೆಯಲ್ಲಿ ವಿರಳ. ಸಸ್ಯಾಹಾರಿ ಪ್ರಾಣಿಗಳನ್ನು ತಿಂದು ಬದುಕಲೇಬೇಕಾದ ಇವು ತಮ್ಮ ಅಗತ್ಯಕ್ಕೆ ಮೀರಿ ಪ್ರಾಣಿಗಳನ್ನು ಭೇಟಿಯಾಡುವುದಿಲ್ಲ. ಹೊಟ್ಟೆ ತುಂಬಿದ ಮಾಂಸಾಹಾರಿ ಪ್ರಾಣಿಯೊಂದು ಪಕ್ಕದಲ್ಲೇ ಸುಳಿದಾಡುವ ತನ್ನ ಆಹಾರ ಜೀವಿಯನ್ನು ನಿರ್ಮಮಕಾರವಾಗಿ ಕಾಣುತ್ತದೆ. ಪ್ರಕೃತಿಯ ಈ ಅದ್ಭುತ ವಾಸ್ತವವನ್ನು ನೋಡಿ ಮನುಷ್ಯ ಕಲಿಯಬೇಕಾದದ್ದು ಬಹಳಷ್ಟಿದೆ.

ಪ್ರಕೃತಿ ಸಮತೋಲನವನ್ನು ತಮ್ಮ ಪಾಡಿಗೆ ತಾವು ಕಾಪಾಡಿಕೊಂಡು ಬರುತ್ತಿರುವ ಕಾಡಿಗೆ ಮನುಷ್ಯ ಹೋಗಿ ಅಲ್ಲಿನ ಜೀವಿಗಳನ್ನು ಬೇಟೆಯಾಡುವುದು ಕ್ರೂರ ಕೃತ್ಯವೆಂದು ಬಗೆಯಬೇಕಾಗುತ್ತದೆ. ಕಾಡು ಪ್ರಾಣಿಗಳನ್ನು ಆಹಾರಕ್ಕಾಗಲಿ, ವಿನೋದಕ್ಕಾಗಲಿ ಬೇಟೆಯಾಡುವುದು ಜೀವ ವಿರೋಧಿಯೂ, ನಿಸರ್ಗ ನಿಯಮ ವಿರೋಧಿಯೂ ಆಗಿರುತ್ತದೆ. ತಾನು ಸಾಕಿಲ್ಲದ, ಅಭಿವೃದ್ಧಿಪಡಿಸಿದ ಯಾವ ಸಸ್ಯ–ಪ್ರಾಣಿ ಸಂಪತ್ತಿನ ಮೇಲೂ ಮನುಷ್ಯನಿಗೆ ಹಕ್ಕಿಲ್ಲ. ಕಾಡು– ಕಾಡಿನ ಪ್ರಾಣಿಗಳ ಪ್ರಪಂಚ. ಅಲ್ಲಿ ಅವು ತಮ್ಮ ಜೀವನ ಕ್ರಮಕ್ಕನುಗುಣವಾದ ಆಹಾರಸೇವನೆಯ ಮೂಲಕ ಸಮತೋಲನವನ್ನು ಕಾಪಾಡಿಕೊಂಡು ಬದುಕುತ್ತಿರುತ್ತವೆ. ಅಲ್ಲಿಗೆ ಮನುಷ್ಯನ ಪ್ರವೇಶವಾದೊಡನೆಯೇ ಆ ಸಮತೋಲನಕ್ಕೆ ಧಕ್ಕೆಯುಂಟಾಗಿ ಪ್ರಕೃತಿ ನಿಯತಿಯಲ್ಲಿ ಏರುಪೇರಾಗುತ್ತದೆ. ಅದರ ಪರಿಣಾಮ ಮಾನವ ಪ್ರಪಂಚದ ಮೇಲೂ ಆಗುತ್ತದೆ ಎಂಬುದನ್ನು ಮನುಷ್ಯ ಅರಿಯುವಷ್ಟರಲ್ಲಿ ಅನಾಹುತ ಸಂಭವಿಸಿರುತ್ತದೆ. ಈ ಅಂಶವನ್ನೇ ನಮ್ಮ ಪರಿಸರವಾದಿಗಳು ನಾಗರಿಕ ಪ್ರಪಂಚಕ್ಕೆ ತಿಳಿಸಲು ಎಣಗಾಡುತ್ತಿದ್ದಾರೆ.

ಮಾಂಸಾಹಾರ ಮಾನವನ ಅತ್ಯಂತ ಪ್ರಿಯವಾದ, ಆದಿಕಾಲದಿಂದಲೂ ನಡೆದು ಬಂದಿರುವ ಆಹಾರ ಪದ್ಧತಿ. ಅಪಾರವಾದ ಸಮುದ್ರ ಈ ಬೇಡಿಕೆಯನ್ನು ಬಹುಮಟ್ಟಿಗೆ ಈಡೇರಿಸುತ್ತದೆ. ಒಂದು ಕಡೆಯಿಂದ ಮತ್ತೊಂದು ಕಡೆಗೆ ಅಲೆದಾಡುವುದನ್ನು ನಿಲ್ಲಿಸಿ, ಊರು ಕಟ್ಟಿ ಒಂದೆಡೆ ವಾಸ ಮಾಡಲಾರಂಭಿಸಿದ ಮಾನವ ತನ್ನ ಬದುಕಿಗೆ ಮಾಂಸಾಹಾರಕ್ಕಿಂತ ಮಿಗಿಲಾಗಿ ಸಸ್ಯೋತ್ಪನ್ನಗಳನ್ನು ಬಳಸಲು ಪ್ರಾರಂಭಿಸಿದ. ಈ ಹಂತದಲ್ಲೇ ಅವನು ಕೃಷಿಕನಾದ. ಕೃಷಿಯಲ್ಲಿ ತನಗೆ ಬೇಕಾದ ಬೆಳೆಗಳನ್ನು ಬೆಳೆಯುವುದರ ಜೊತೆಗೆ, ತನಗೆ ಬೇಕಾದ ಪ್ರಾಣಿಗಳನ್ನೂ ಸಾಕಿ 'ಕೃಷಿ' ಮಾಡಲಾರಂಭಿಸಿದ.

ಅಂದರೆ ಮನುಷ್ಯ ತನ್ನ ಆಹಾರಕ್ಕಾಗಿ ಹೇಗೆ ಸಸ್ಯಗಳನ್ನು ಬೆಳೆಯುತ್ತಾನೋ ಹಾಗೆಯೇ ತನಗೆ ಬೇಕಾದ ಪ್ರಾಣಿಗಳನ್ನು ಸಾಕಿ ಸಲುಹಿ ಅವು ಹದಕ್ಕೆ ಬಂದಾಗ ತನ್ನ ಆಹಾರಕ್ಕಾಗಿ ಬಳಸಲು ಶುರುಮಾಡಿದನು. ಈ ಪ್ರಾಣಿಗಳ ಮೇಲೆ ಅವನಿಗೆ ಸಹಜವಾದ ಹಕ್ಕು ಪ್ರಾಪ್ತವಾಗಿರುತ್ತದೆ. ಹೇಗೆ ದವಸ ಧಾನ್ಯಗಳನ್ನು ತಿನ್ನಲೆಂದೇ ಬೆಳೆಯುತ್ತಾನೋ, ಹಾಗೆಯೇ ತಾನು ಸಾಕುವ ಕುರಿ, ಕೋಳಿ, ಮೇಕೆ, ಹಂದಿ ಮುಂತಾದ ಪ್ರಾಣಿಗಳನ್ನೂ ಸಹ ತಿನ್ನಲೆಂದೇ ಸಾಕಿ ಬೆಳಸುತ್ತಾನೆ. ಇವುಗಳನ್ನು ಕೊಂದು ತಿನ್ನುವುದರಿಂದ ಯಾವ ಬಗೆಯ ಕ್ರೌರ್ಯವನ್ನು ಬಗೆದಂತಾಗುವುದಿಲ್ಲ! ಜಗತ್ತಿನ ಎಲ್ಲಾ ಭಾಗಗಳಲ್ಲೂ ಮನುಷ್ಯ ಸಸ್ಯಗಳನ್ನು ಕೃಷಿ ಮಾಡಿ ಬೆಳೆದಂತೆಯೇ ಪ್ರಾಣಿಗಳನ್ನೂ ಸಹ ತನ್ನ ಆಹಾರಕ್ಕಾಗಿ ಮತ್ತು ಆರ್ಥಿಕ ಅನುಕೂಲಕ್ಕಾಗಿ ಸಾಕುತ್ತಾನೆ. ಕೇವಲ ಪ್ರಾಣಿಗಳ ಮೇಲಿನ ಪ್ರೀತಿಯಿಂದ ಸಾಕುತ್ತೇವೆ ಎಂಬ ಮಾತು ತುಂಬ ಔಪಚಾರಿಕವಾದುದು. ಆಧುನಿಕ ನಗರಗಳಲ್ಲಿ ಬೆಕ್ಕು, ನಾಯಿ ಮುಂತಾದ ಮುದ್ದು ಪ್ರಾಣಿಗಳನ್ನು ಸಾಕಿ ಆನಂದಿಸುವುದುಂಟು. ಇದೇ ಬಗೆಯ ಪ್ರೀತಿಯನ್ನು ಕೋಳಿ, ಕುರಿ, ಮೇಕೆ ಮುಂತಾದ ಪ್ರಾಣಿಗಳಿಗೆ ಅನ್ವಯಿಸಿ ಮಾತನಾಡುವುದು ಕೃತಕವಾದೀತು.

ತಾನು ಸಾಕದ ಕಾಡು ಪ್ರಾಣಿಗಳನ್ನು ಬೇಟೆಯಾಡುವ ಹಕ್ಕು ಮನುಷ್ಯನಿಗಿಲ್ಲ. ಕಾಡಿನ ಪ್ರಪಂಚವೇ ಬೇರೆ. ಈ ಸತ್ಯವನ್ನು ಅರ್ಥಮಾಡಿಕೊಂಡರೆ ಪ್ರಕೃತಿಗೆ ಅವನು ಸಲ್ಲಿಸುವ ದೊಡ್ಡ ಗೌರವವಾಗುತ್ತದೆ.

■ ಶಿಕಾಕು

## ಮಾತೇ ಮುತ್ತು

- ಯಾರದೋ ಸಂಪತ್ತಿನಿಂದ ಬದುಕುವವರು ಪರಾವಲಂಬಿಗಳಾಗಿ ಕ್ರೋಧ, ದುರಹಂಕಾರ, ದುರಾಶೆಯಂಥ ದುರ್ಗುಣ– ದುಶ್ಚಟಗಳಿಗೆ ಬಲಿಯಾಗಿ ತಮ್ಮ ಇಹಲೋಕ ಪರಲೋಕಗಳೆರಡನ್ನು ಕೆಡಿಸಿಕೊಳ್ಳುತ್ತಾರೆ.
  –ವೀರೇಂದ್ರ ಹೆಗ್ಗಡೆ

- ಯಾರಿಗೆ ಸ್ವಯಂ ಬುದ್ಧಿ ಇಲ್ಲವೋ ಅವನಿಗೆ ಶಾಸ್ತ್ರವೂ ಸಹ ಏನನ್ನು ಮಾಡಲು ಸಾಧ್ಯ? ಎರಡು ಕಣ್ಣು ಇಲ್ಲದವನಿಗೆ ಕನ್ನಡಿಯಾದರೂ ಏನನ್ನು ತಾನೆ ಮಾಡಲು ಸಾಧ್ಯ?
  –ಹಿತೋಪದೇಶ

- ಪುಸ್ತಕಗಳನ್ನು ಪ್ರೀತಿಸುವವರಿಗೆ ಬೇರೆ ಸ್ನೇಹಿತರ ಅಗತ್ಯವಿಲ್ಲ.
  –ಬರ್ರೋ

- ಸಮಯವಿಲ್ಲ ನಮಗೆ ನನ್ನ ಅರಿಯಲು; ಸದಾ ಸ್ವತಂತ್ರ ನಾ ಧಣಿಗಳಿಗಾಗಿ ದುಡಿಯಲು.
  –ಡಾ.ಬಿ.ಕೃಷ್ಣಮೂರ್ತಿ

- ಮತ್ತೆ ಮತ್ತೆ ಅದನ್ನೇ ಚಿಂತಿಸದಿರುವುದು ದುಃಖಕ್ಕೆ ಔಷಧ. ಚಿಂತಿಸುತ್ತಲೇ ಇದ್ದರೆ ದುಃಖ ಕಳೆಯುವುದಿಲ್ಲ, ಮತ್ತಷ್ಟು ಹೆಚ್ಚುತ್ತದೆ.
  –ಮಹಾಭಾರತ

- ಸತ್ಯದಲ್ಲಿ ನಡೆಯುವುದು ಶೀಲ, ಸತ್ಯದಲ್ಲಿ ನುಡಿವುದು ಶೀಲ, ಸತ್ಯ ಸದಾಚಾರದಲ್ಲಿ ವರ್ತಿಸಿ ನಿತ್ಯವನರಿವುದೇ ಶೀಲ.
  –ತೋಂಟದ ಸಿದ್ದಲಿಂಗ

- ಯಾವನು ಯಾವಾಗಲೂ ಪ್ರಶ್ನೆ ಮಾಡುತ್ತಾನೋ, ಕಿವಿಗೊಟ್ಟು ಕೇಳುತ್ತಾನೋ ಮತ್ತು ಯಾವಾಗಲೂ ಚೆನ್ನಾಗಿ ಮನದಟ್ಟು ಮಾಡಿಕೊಳ್ಳುತ್ತಾನೆಯೋ ಅವನ ಬುದ್ಧಿಯು ಸೂರ್ಯ ಕಿರಣಗಳಿಂದ ತಾವರೆಯು ಹೇಗೋ ಹಾಗೆ ಬೆಳೆಯುತ್ತದೆ.
  –ಪಂಚತಂತ್ರ

- ದುಃಖಗಳಲ್ಲಿ ಮನಸ್ಸಿನ ತಳಮಳವಿಲ್ಲದವರು, ಸಂಪತ್ತು ಬಂದಾಗ ಗರ್ವ ಪಡದೇ ಇರುವವರು, ಕೆಲಸಗಳಲ್ಲಿ ಹೆದರಿಕೆ ಇಲ್ಲದವರು ಧೀರರು. ಅಂಥವರು ಜಗತ್ತನ್ನೇ ಜಯಿಸಿದವರು.
  –ಕಥಾಸರಿತ್ಸಾಗರ

- ವಿದ್ವತ್ತು ಮತ್ತು ರಾಜತ್ವಗಳು ಎಂದಿಗೂ ಸಮಾನವಲ್ಲ. ರಾಜನು ತನ್ನ ದೇಶದಲ್ಲಿ ಮಾತ್ರ ಪೂಜಿತನಾಗುತ್ತಾನೆ, ವಿದ್ವಾಂಸನು ಎಲ್ಲ ದೇಶಗಳಲ್ಲಿಯೂ ಪೂಜಿತನಾಗುತ್ತಾನೆ.
  –ಸುಭಾಷಿತ

- ಕಾನೂನು ಮನುಷ್ಯರಿಗೆ ಅಧಿಕಾರವನ್ನು ನೀಡುತ್ತದೆ. ಆದರೆ ಅಧಿಕಾರದ ಶಕ್ತಿಯನ್ನು ಪ್ರದಾನ ಮಾಡುವುದಿಲ್ಲ. ಕಾನೂನು ಮನುಷ್ಯನಿಗೆ ಬಹಳಷ್ಟು ಅವಕಾಶಗಳನ್ನು ನೀಡುತ್ತದೆ. ಆದರೆ ಅವಕಾಶಗಳು ಲಾಭ ಪಡೆಯಲು ವಾತಾವರಣ ನಿರ್ಮಾಣ ಮಾಡುವುದಿಲ್ಲ.
  –ಚೆಸ್ಟರ್ ಫಾಸ್ಟ್

- ರಕ್ತಪಾತವಿಲ್ಲದೆ ದೊರೆಯುವ ಗೆಲುವು ಅತ್ಯುತ್ತಮ.
  –ಸರ್ವಾಂಟಿಸ್

- ನೀವು ಸುಂದರ ಆಗಿರಬಹುದು, ಆದರೆ ನಿಮಗಿಂತ ಸುಂದರ ಅಲ್ಲದವರನ್ನು ಕಳಪೆ ಎಂದು ಹೀಗಳೆಯಬೇಡಿ. ಹಾಗೆ ಯೋಚಿಸಿದರೆ ನೀವು ಕುರೂಪ ಆಗುತ್ತೀರಿ.
  –ಅಜ್ಞಾತ

- ಮನಸ್ಸು ಒಡೆದ ಮೇಲೆ ಪ್ರೀತಿ ಎಲ್ಲಿ? ಪ್ರೀತಿ ಇಲ್ಲದ ಮೇಲೆ ಸುಖವೆಲ್ಲಿ?
  –ಭಾಮಿನೀ ವಿಲಾಸ

- ಅಹಂಕಾರದ ಅರ್ಥ ಸಂಗ್ರಹಿಸುವುದು, ಸಂಚಯ ಮಾಡುವುದು. ಅದು ಸದಾ ಬೇರೆಯವರಿಂದ ಸ್ವೀಕರಿಸುತ್ತಲೇ ಇರುತ್ತದೆ.
  –ರವೀಂದ್ರನಾಥ ಠಾಕೂರ್